# ಒಂದು ಅದ್ಭುತ ನೂತನ ಕೊಡುಗೆ

ಸ್ವಾಮಿ ಸತ್ಯೇಶಾನಂದ

ಗ್ರಂಥಾಭಿಮಾನಿಗಳು ಕಡಿಮೆಯಾಗುತ್ತಿರುವ ಈಗಿನ ಕಾಲದಲ್ಲಿ ಒಂದು ಬೃಹದ್ ಗ್ರಂಥವನ್ನು ಅಧ್ಯಯನ ಮಾಡಿ ಅದರಿಂದುಂಟಾದ ಸಾತ್ತ್ವಿಕ ಆನಂದಾನುಭವದ ವಿವರಣೆಯನ್ನು ನೀಡಿದ್ದಾರೆ ಸ್ವಾಮಿ ಸತ್ಯೇಶಾನಂದರು. ಅವರು ರಾಂಚಿಯಲ್ಲಿರುವ ರಾಮಕೃಷ್ಣ ಆಶ್ರಮದ ಟಿ.ಬಿ.ಸ್ಯಾನಿಟೋರಿಯಂನಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವರು.

**ಕೆಲವು ದಿನಗಳ** ಹಿಂದೆ ನನ್ನ ಸಹೋದರ ಸಂನ್ಯಾಸಿಗಳೊಬ್ಬರು ಒಂದು ಪುಸ್ತಕವನ್ನು ಅಂಚೆಯಲ್ಲಿ ನನಗೆ ಕಳಿಸಿದ್ದರು. ಪ್ಯಾಕೆಟ್ ತೆರೆದು ನೋಡಿದಾಗ ಸಂತೋಷ ಹಾಗೂ ಆಶ್ಚರ್ಯ ಏಕಕಾಲದಲ್ಲಿ ಉಂಟಾದವು. ಅದರಿಂದ ನನಗಾದ ಉಪಕಾರ, ಆನಂದ ಅಪಾರ. ಅದನ್ನು ಇತರರ ಜೊತೆ ಹಂಚಿಕೊಳ್ಳುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ.

ಆ ಪ್ಯಾಕೆಟ್‌ನಲ್ಲಿದ್ದ ಪುಸ್ತಕ—ಭಗವದ್ಗೀತೆಗೆ ಸಂಬಂಧಿಸಿದುದು. ಇದು ಅದ್ವೈತ ಆಶ್ರಮದಿಂದ ಇತ್ತೀಚೆಗೆ ಬಿಡುಗಡೆಯಾದ ಒಂದು ಅದ್ಭುತ ಪ್ರಕಟಣೆ. ಅದರ ಲೇಖಕರು ರಾಮಕೃಷ್ಣ ಮಹಾಸಂಘದ ಮಹಾಧ್ಯಕ್ಷರಾದ ವಿಶ್ವವಿಖ್ಯಾತ ಶ್ರೀಮತ್ ಸ್ವಾಮಿ ರಂಗನಾಥಾನಂದಜೀ ಮಹಾರಾಜರು. ಇಂಗ್ಲಿಷ್ ಮೂಲದ ಈ ಗ್ರಂಥದ ಹೆಸರು *Universal Message of the Bhagavad Gita—An Exposition of the Gita in the Light of Modern Thought and Modern Needs.*

ಗ್ರಂಥದ ಹೆಸರೇ ಎಷ್ಟು ಅರ್ಥಗರ್ಭಿತವಾಗಿದೆ! ಇಲ್ಲಿ ಸರ್ವೋಪಕಾರಿ ಗೀತಾಮೃತವು ಎಲ್ಲರಿಗೂ ಅರ್ಥವಾಗುವಂತೆ ಎಲ್ಲರಿಗೂ ಸಹಾಯವಾಗುವ ರೀತಿಯಲ್ಲಿ ಸುಂದರ, ಸರಳ, ಆಧುನಿಕ ವೈಜ್ಞಾನಿಕ ಭಾಷೆಯಲ್ಲಿ ವಿವರಿಸಲ್ಪಟ್ಟಿದೆ. ನಮ್ಮಲ್ಲಿ ಅಂದರೆ ಆಧುನಿಕ ವಿದ್ಯಾಭ್ಯಾಸ ಪಡೆದವರಲ್ಲಿ ಹೆಚ್ಚಿನವರಿಗೆ ಗೀತೆ, ಉಪನಿಷತ್ತು ಎಂಬ ಹೆಸರು ಕೇಳಿದರೇ ಒಂದು ರೀತಿಯ ಭಯ, ಅಳುಕು, ಮುಜುಗರ, ಅಲರ್ಜಿ. ಏನೋ ಒಂದು ಥರದ ಅಹಿತಕರ ಭಾವನೆ ! "ಅಯ್ಯೊ! ಈ ಶಾಸ್ತ್ರಗಳನ್ನೆಲ್ಲಾ ಯಾರು ಓದುತ್ತಾರಪ್ಪಾ! ಮೂಲ ಸಂಸ್ಕೃತ ಭಾಷೆಯಲ್ಲಿದೆ. ಸಂಸ್ಕೃತ ನಮಗೆ ಬರೋದಿಲ್ಲ! ಅನುವಾದ ಓದುವುದಕ್ಕೆ ಬೇಸರ. ಶಂಕರಾಚಾರ್ಯಾದಿಗಳು ಈ ಗೀತೆ, ಉಪನಿಷತ್ತುಗಳ ಮೇಲೆ ಭಾಷ್ಯ ಬರೆದು ಹಲವು ನೂರು ವರ್ಷಗಳೆ ಆಗಿಹೋದವು. ಇವೆಲ್ಲಾ ಈ ಆಧುನಿಕ ಯುಗಕ್ಕೆ ಅಂದರೆ ಮಾಹಿತಿ ತಂತ್ರಜ್ಞಾನದ, ಮಾಲಿಕ್ಯುಲರ್ ಬಯಾಲಜಿ (Molecular Biology) ಯುಗಕ್ಕೆ ಪ್ರಸಕ್ತವೇ? ಒಟ್ಟಿನಲ್ಲಿ, ಈ ಗೀತೆ, ವೇದಾಂತ ಅಂದರೆ ದೊಡ್ಡ ಬೋರು. ಇದೆಲ್ಲಾ ನಮಗ್ಯಾಕಪ್ಪಾ! ಈ ಹಣೆಬರಹ ಬೇಡವೇ ಬೇಡ" ಎಂಬ ಭಾವನೆ, ಸಂಶಯ—ಸಹಜ, ಸ್ವಾಭಾವಿಕ.

ಆದರೆ ಈ ಹೊಸ ವ್ಯಾಖ್ಯಾನವನ್ನು ಓದಿದಾಗ, ಕ್ಯಾಸೆಟ್ (ಧ್ವನಿಸುರುಳಿ) ಗಳ ಮೂಲಕ ಕೇಳಿದಾಗ ನಮ್ಮೆಲ್ಲಾ ಅಳುಕು, ಹಿಂಜರಿಕೆಗಳು ಕಂಬಿ ಕೀಳುತ್ತವೆ.

ಈ ನವ್ಯ ವ್ಯಾಖ್ಯಾನ ನಮಗೆ ಯಾವ ರೀತಿ ನೆರವು ನೀಡುತ್ತದೆ, ನಮ್ಮ ದೈನಂದಿನ ಜೀವನದಲ್ಲಿ ಯಾವ ರೀತಿ ಮಾರ್ಗದರ್ಶನ ಮಾಡುತ್ತದೆ ಎಂಬುದರ ಬಗ್ಗೆ ಸ್ವಲ್ಪ ಚರ್ಚೆ ಮಾಡೋಣ. ಈ ಪುಸ್ತಕದಲ್ಲಿ ಸ್ವಾಮೀಜಿಯವರು ಸರಳ-ಸುಂದರ ಆಂಗ್ಲ ಭಾಷೆಯಲ್ಲಿ ಗೀತೆಯ ಎಲ್ಲಾ ಶ್ಲೋಕಗಳನ್ನೂ ವಿವರಿಸಿದ್ದಾರೆ. ಈ ಕಠಿಣ ಸಮಯದಲ್ಲಿ, ಈ ಭಯೋತ್ಪಾದಕ ವಾತಾವರಣದಲ್ಲಿ, ಎಲ್ಲೆಲ್ಲೂ ಭಯ, ಸಂಶಯ, ನಿರಾಶೆ, ಕ್ರೌರ್ಯ, ಭೋಗಪ್ರವೃತ್ತಿ ತಾಂಡವವಾಡುತ್ತಿರುವ ಸಮಾಜದಲ್ಲಿ ಗೀತಾಮಾತೆ ಯಾವ ರೀತಿ ನಮ್ಮನ್ನು ಕೈಹಿಡಿದು ಮುನ್ನಡೆಸಬಲ್ಲಳು ಎಂಬುದನ್ನು ಎಂಥವರಿಗೂ ಅರ್ಥವಾಗುವ, ಹಿಡಿಸುವ ಶೈಲಿಯಲ್ಲಿ ಸ್ವಾಮೀಜಿಯವರು ವಿವರಿಸಿದ್ದಾರೆ. ಸ್ವಾಮೀಜಿಯವರು ಹೈದರಾಬಾದಿನ ಆಶ್ರಮದ ಅಧ್ಯಕ್ಷರಾಗಿದ್ದಾಗ ಸುಮಾರು ಎರಡು ವರ್ಷಗಳ ಕಾಲ ಗೀತೆಯ ಮೇಲೆ ಪ್ರತಿ ಭಾನುವಾರ ಉಪನ್ಯಾಸ ನೀಡಿದ್ದರು. ಈ ಅದ್ಭುತ ಉಪನ್ಯಾಸಗಳನ್ನು ಮೊದಲು ಧ್ವನಿಮುದ್ರಿಸಲಾಯಿತು. ಆ ಅಮೂಲ್ಯ ಕ್ಯಾಸೆಟ್‌ಗಳೇ ಈಗ ಪುಸ್ತಕರೂಪದಲ್ಲಿ ಬೆಳಕು ಕಂಡಿವೆ ಹಾಗೂ ಸಹಸ್ರಾರು ಆಧುನಿಕ ನರನಾರಿಯರ ಜೀವನವನ್ನು ಬೆಳಗಿಸುತ್ತಿವೆ. ಈ ಗ್ರಂಥ ಒಟ್ಟು ಮೂರು ಸಂಪುಟಗಳಲ್ಲಿ ಪ್ರಕಟವಾಗಿದೆ. ಈಗಾಗಲೇ ಅನೇಕ ಪ್ರತಿಗಳು ಮಾರಾಟವಾಗಿವೆ. ಪರಮಪೂಜ್ಯ ಸ್ವಾಮೀಜಿಯವರಿಗೆ ಈಗ ತೊಂಭತ್ತಮೂರು ವರ್ಷ. ಮಾನವ ಜನಾಂಗದ ಮೇಲಿರುವ ಅವರ ಪ್ರೀತಿ, ಅನುಕಂಪೆ, ಕಳಕಳಿ ಅಪಾರ. ಈ ಇಳಿ ವಯಸ್ಸಿನಲ್ಲೂ ಸಹ ಅದಮ್ಯ ಉತ್ಸಾಹದಿಂದ ಅವರೇ ಸ್ವತಃ ಕೆಲವು ಸಂನ್ಯಾಸೀ ಹಾಗೂ ಭಕ್ತರ ಸಹಕಾರದೊಂದಿಗೆ ಆ ಉಪನ್ಯಾಸಗಳನ್ನು ಸಂಸ್ಕರಿಸಿ ನಮ್ಮೆಲ್ಲರಿಗೂ ಗೀತಾಮೃತ-ರಸದೌತಣವನ್ನೇ ಉಣಿಸುತ್ತಿದ್ದಾರೆ.

ಇಂಗ್ಲಿಷ್‌ನಲ್ಲಿ "unputdownable" (ಕೆಳಗೆ ಇಡಲಾಗದ)

ಎಂಬ ಪದವಿದೆ. ಪರಮಪೂಜ್ಯ ರಂಗನಾಥಾನಂದಜೀ ಮಹಾರಾಜರ ಈ "ಗೀತೆ" ಅಂಥ ಒಂದು "unputdownable" ಪುಸ್ತಕ. ಒಂದೇ ಸಮನೆ ಓದಿಸಿಕೊಂಡು ಹೋಗುತ್ತದೆ. ಈ ಬೃಹತ್ ಗ್ರಂಥವನ್ನು ಓದಿ ಮುಗಿಸುವ ತನಕ ಕೆಳಗಿಡಲು ಮನಸ್ಸೇ ಆಗುವುದಿಲ್ಲ. ಗೀತೆ ಹೇಳುವುದು ಆತ್ಮತತ್ತ್ವದ ಬಗ್ಗೆ, ಬ್ರಹ್ಮಜ್ಞಾನದ ಬಗ್ಗೆ. ಇಂಥ ಗಹನವಾದ ತತ್ತ್ವವನ್ನು ಸುಲಭ, ಸುಲಲಿತ ರೀತಿಯಲ್ಲಿ, ಅತ್ಯಾಕರ್ಷಕ, ಮನಮೋಹಕ, ಮನೋಜ್ಞ ಶೈಲಿಯಲ್ಲಿ, ಸಣ್ಣ ಮಗುವಿಗೂ ಅರ್ಥವಾಗುವ ರೀತಿಯಲ್ಲಿ ಸ್ವಾಮೀಜಿಯವರು ವಿವರಿಸಿದ್ದಾರೆ. ವಿಶ್ವದ ಎಲ್ಲರ ಬಗೆಗೂ ಅವರಿಗಿರುವ ಕಳಕಳಿ, ಅನುಕಂಪೆ, ಪ್ರೀತಿ ಈ ಪುಸ್ತಕದ ಪುಟಪುಟದಲ್ಲೂ ಸ್ಫುಟಗೊಂಡಿದೆ. ಯಾವ ರೀತಿ ಜೀವಿಸಿದರೆ, ಹೇಗೆ ನಡೆದರೆ ಜೀವನ ಚೇನಾಗಬಹುದು ಎಂಬುದನ್ನು ಇತಿಹಾಸ, ಸಾಹಿತ್ಯ, ವಿಜ್ಞಾನ ಹಾಗೂ ಸ್ವಾನುಭವದ ಸಹಾಯದಿಂದ ತೋರಿಸಿ ಕೊಟ್ಟಿದ್ದಾರೆ. ನಮ್ಮೆಲ್ಲರನ್ನೂ ಹೆತ್ತು, ಬೆಳೆಸಿದ ಸ್ವಂತ ತಾಯಿಯ ಪ್ರೀತಿಯನ್ನು ನಾವೆಲ್ಲರೂ ಅನುಭವಿಸಿದ್ದೇವೆ. ಇಂಥ ಸಹಸ್ರ ಮಾತೆಯರ ಪ್ರೀತಿ, ವಾತ್ಸಲ್ಯವನ್ನೂ ಮೀರಿಸುವ ಗೀತಾಮಾತೆ ಕರುಣಾ ಸಾಗರಳು. ಆಕೆಯ ಆದೇಶವನ್ನು ಪಾಲಿಸಿದರೆ ಸುಲಭದಲ್ಲಿ ನಾವು ಭವಸಾಗರವನ್ನು ದಾಟಿ ಅಮರರಾಗಬಹುದು, **ಸುಖಂ ಬಂಧಾತ್ ಪ್ರಮುಚ್ಯತೇ** (ಸುಲಭವಾಗಿ ಬಂಧನದಿಂದ ಮುಕ್ತನಾಗುತ್ತಾನೆ) ಎಂದು ಗೀತೆಯ ಮಹತ್ವವನ್ನು ಸಾರಿ ಹೇಳಿದ್ದಾರೆ.

ಪರಮ ಪೂಜ್ಯ ಸ್ವಾಮೀಜಿಯವರ ಪುಸ್ತಕಗಳು ಹಾಗೂ ಕ್ಯಾಸೆಟ್‌ಗಳು ಈ ಆಧುನಿಕ ಸಮಾಜಕ್ಕೆ, ಈ ಯುಗಕ್ಕೆ ಒಂದು ಅಪೂರ್ವ ಕೊಡುಗೆ. ಅತ್ಯಂತ ಸರಳ, ಸುಂದರ, ಆಂಗ್ಲ ಭಾಷೆಯಲ್ಲಿರುವ ಅವರ ಸಂದೇಶ, ಅವರ ವಾಣಿ ನಿಜಕ್ಕೂ ದಿವ್ಯ, ಭವ್ಯ. ಸಂನ್ಯಾಸಿಗಳಿಗೆ, ಗೃಹಸ್ಥರಿಗೆ, ಮಕ್ಕಳಿಗೆ, ವೃದ್ಧರಿಗೆ — ಎಲ್ಲರಿಗೂ ಎಂಥವರಿಗೂ ಈ ದಿವ್ಯ, ಶಕ್ತಿದಾಯೀ ಸಂದೇಶ ಸ್ಫೂರ್ತಿ ನೀಡಬಲ್ಲದು, ಅದಮ್ಯ ಉತ್ಸಾಹ, ಚೇತನ ನೀಡಬಲ್ಲದು, ಕೈಹಿಡಿದು ಮೇಲೆತ್ತಿ ಮುನ್ನಡೆಸಬಲ್ಲದು, ಪ್ರಗತಿಯ ಪಥದಲ್ಲಿ ಮುನ್ನುಗ್ಗುವ ಛಲ ತುಂಬಬಲ್ಲದು. "ಹೇ ಮಾನವ, ನೀನು ಸಾಮಾನ್ಯನಲ್ಲ, ನಿನ್ನಲ್ಲಿ ಅಸಾಧಾರಣ, ಅನಂತ ಶಕ್ತಿಯಿದೆ. ನೀನು ದೇವತಾಸ್ವರೂಪಿ, ನೀನು ಪಾಪಿಯಲ್ಲ, ದುರ್ಬಲನಲ್ಲ. ಅಳಬೇಡ, ಹೆದರಬೇಡ, ಕೊರಗ ಬೇಡ, ದುಃಖಿಸಬೇಡ, ನೀನು ಸಾಕ್ಷಾತ್ ಭಗವಂತನ, ವಿಶ್ವ ನಿಯಾಮಕನ ಸಂತಾನ. ಏಳು, ಎದ್ದೇಳು, ನಿನ್ನ ದಿವ್ಯ ಭವ್ಯ ಸ್ವರೂಪವನ್ನು ಸದಾ ನೆನೆದು ಮುನ್ನುಗ್ಗು" ಎಂಬ ಉಪನಿಷತ್ತಿನ, ಗೀತೆಯ ಅಭಯ ವಾಣಿಯನ್ನು ಸ್ವಾಮೀಜಿಯವರು ಆಧುನಿಕ ವಿಜ್ಞಾನಿಗಳಿಗೂ ವಿಚಾರವಂತರಿಗೂ ಮನದಟ್ಟಾಗುವಂತೆ ಅತ್ಯಾಕರ್ಷಕವಾಗಿ, ಸ್ವಾರಸ್ಯಕರವಾಗಿ ತಮ್ಮ ಗಂಧರ್ವನಿಂದಿತ ವಾಣಿಯಲ್ಲಿ, ಶಕ್ತಿಶಾಲಿ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ.

ಆಫೀಸು, ಕಾಲೇಜು, ಆಸ್ಪತ್ರೆ, ಗೃಹಕೃತ್ಯ ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿ ದಿನವಿಡೀ ಸೇವೆ ಸಲ್ಲಿಸುತ್ತಿರುವವರಿಗೆ ಸಮಯದ ಅಭಾವವಿರುತ್ತದೆ, ಗಾಢವಾಗಿ ಚಿಂತನ-ಮಂಥನ ಮಾಡುವುದಕ್ಕೆ ಬೇಕಾದ ತಾಳ್ಮೆ, ಮಾನಸಿಕ ಸ್ಥಿತಿ ಇರುವುದಿಲ್ಲ, ಶಾಸ್ತ್ರಾಧ್ಯಯನಕ್ಕೆ ಬೇಕಾದ ಜ್ಞಾನ, ಮಾರ್ಗದರ್ಶನವೂ ಇರುವುದಿಲ್ಲ. ಅವರಿಗೆಲ್ಲಾ ಪರಮಪೂಜ್ಯ ಸ್ವಾಮೀಜಿಯವರ ಈ ಗೀತಾ ವ್ಯಾಖ್ಯಾನ ವರಪ್ರದವಾಗಿದೆ. ವಿಜ್ಞಾನ, ಧರ್ಮ, ಪುರಾಣ, ಸಾಹಿತ್ಯ, ಇತಿಹಾಸ— ಹೀಗೆ ಜೀವನದ ಎಲ್ಲಾ ಕ್ಷೇತ್ರಗಳಿಂದ ಉತ್ಕೃಷ್ಟವಾದ, ಅಮೂಲ್ಯ ಮುತ್ತು ರತ್ನಗಳನ್ನು ಆರಿಸಿ ತೆಗೆದು ನಮ್ಮ ಮುಂದೆ ಇಟ್ಟಿದ್ದಾರೆ.

ಇದೊಂದು ನಡೆದ ಘಟನೆ. ನಾನು ಹೌರಾ ಸ್ಟೇಷನ್‌ನಲ್ಲಿ ನಿಂತಿದ್ದೆ. ಒಬ್ಬ ಅಪರಿಚಿತ ಬಂಗಾಳಿ ವ್ಯಕ್ತಿಯೊಬ್ಬರ ಪರಿಚಯವಾಯಿತು. ಅವರು ಹೇಳಿದರು, "ನೋಡಿ ಮಹಾರಾಜ್, ಸ್ವಾಮಿ ವಿವೇಕಾನಂದರ ವಾಣಿಯನ್ನು ಕೇಳುವ ಭಾಗ್ಯ ನನಗೆ ಸಿಗಲಿಲ್ಲ. ಆದರೆ ರಂಗನಾಥಾನಂದಜೀಯವರ ವಾಣಿಯನ್ನು ಸಾಕ್ಷಾತ್ತಾಗಿ ಕೇಳಿ ನಾನು ಧನ್ಯನಾಗಿದ್ದೇನೆ." ಹೀಗೆ ವಿಶ್ವದಲ್ಲೆಲ್ಲಾ ಸಹಸ್ರಾರು ಜನರ ಮನೆ, ಮನಗಳನ್ನು ಬೆಳಗಿಸಿರುವ ಈ ಮಹಾ ಪುರುಷರ ಗೀತೆಯ ವ್ಯಾಖ್ಯಾನವನ್ನು ಓದಿ, ಕೇಳಿ ನಾವು ಧನ್ಯರಾಗೋಣ, ಬಲಶಾಲಿಗಳಾಗೋಣ, ನಮ್ಮಲ್ಲಿರುವ ದಿವ್ಯತೆಯನ್ನು ಸಾಕ್ಷಾತ್ಕರಿಸಿಕೊಂಡು ಶಾಶ್ವತ ಶಾಂತಿ, ಅಮೃತತತ್ತ್ವವನ್ನು ಪಡೆಯೋಣ. ☆


ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿಯವರ, ಮೇಲೆ ಉಲ್ಲೇಖಿಸಿದ ಗ್ರಂಥ ಈಗ ಕನ್ನಡದಲ್ಲಿ ಲಭ್ಯ




ಪರಮಪೂಜ್ಯ ಸ್ವಾಮಿ ರಂಗನಾಥಾನಂದಜೀಯವರ

ಭಗವದ್ಗೀತೆಯ ವಿಶ್ವಸಂದೇಶ

ಇದರ ೧ನೆ ಭಾಗದ ಬೆಲೆ ರೂ.೧೦೦ ಮಾತ್ರ.

ಅಂಚೆ ವೆಚ್ಚ ಸಹಿತ ರೂ.೧೩೫.೦೦.

೨ನೆಯ ಮತ್ತು ೩ನೆಯ ಭಾಗಗಳು ಶೀಘ್ರದಲ್ಲಿಯೆ ಹೊರಬರಲಿವೆ. ಮೂರೂ ಭಾಗಗಳ ಒಟ್ಟು ಬೆಲೆ ರೂ.೩೦೦.೦೦. ಎಲ್ಲ ಭಾಗಗಳನ್ನು ಒಟ್ಟಿಗೆ ಕೊಂಡರೆ, ಅಥವಾ ನೀವೀಗಾಗಲೇ ಮೊದಲ ಭಾಗವನ್ನು ಹೊಂದಿದ್ದು ಉಳಿದೆರಡು ಭಾಗಗಳಿಗೆ ರೂ.೨೦೦ ಅನ್ನು ಕಳುಹಿಸಿದರೆ, ಅಂಚೆ ವೆಚ್ಚವನ್ನು ನಾವೇ ಭರಿಸುತ್ತೇವೆ. ಹಣವನ್ನು ಡಿ.ಡಿ. ಅಥವಾ ಚೆಕ್ ಮೂಲಕ ಕಳುಹಿಸಬಹುದು.

ಭಗವದ್ಗೀತೆಯ ಬಗೆಗಿನ ಈ ಸಂಪುಟಗಳು ಶ್ರೀಕೃಷ್ಣನ ಸಂದೇಶ ಹಾಗೂ ಆಧುನಿಕ ಕಾಲದಲ್ಲಿ ಅದರ ಮಹತ್ವದ ಬಗ್ಗೆ ಸ್ವಾಮಿ ರಂಗನಾಥಾನಂದರ ಉಜ್ವಲ ವಿವರಣೆಯನ್ನು ಹೊಂದಿದೆ. ಅವರ ಗೀತಾ ನಿರೂಪಣೆ ಅನೇಕ ಬಗೆಯಲ್ಲಿ ಅನನ್ಯವಾಗಿದೆ ಎಂಬುದನ್ನು ನಾನು ಕಂಡಿದ್ದೇನೆ.

— ಡಾ. ರಫೀಕ್ ಜಕಾರಿಯಾ